

# ಮುಂಗಾರಿನ ಜೊತೆ ಮರಗಳ ಕಥೆ

‘ಹಸುರು ಅಭಿಯಾನ’ ಕಾರ್ಯಕ್ರಮದಡಿ ಗಿಡಗಳನ್ನು ನೆಡುವ ಕಾರ್ಯಕ್ರಮ ಹಲವು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಆದರೆ, ನೆಡುವ ಹುಮ್ಮಸ್ಸಿನಲ್ಲಿ ನಾವು ನೆಡುತ್ತಿರುವ ಗಿಡ ಯಾವುದು? ಅದು ನಮ್ಮ ಪರಿಸರಕ್ಕೆ ಕೊಡುಗೆಯೇ, ಪಿಡುಗೇ ಎಂಬ ವಿಚಾರ ಮಾಡುತ್ತಿಲ್ಲ. ಕೇವಲ ವೇಗವಾಗಿ ಬೆಳೆಯುವುದನ್ನೇ ಮಾನದಂಡವಾಗಿಸಿ ಮರಗಳನ್ನು ಬೆಳೆಸಲಾಗುತ್ತಿದೆ. ಇವುಗಳ ಬದಲು ಜೀವಕೊಂಡಿಯಲ್ಲಿ ಮಹತ್ತರ ಪಾತ್ರ ನಿರ್ವಹಿಸುವ ಗಿಡಮರಗಳನ್ನು ಬೆಳೆಸಿದರೆ ಅವು ಮುಂದಿನ ಪೀಳಿಗೆಗೆ ಬುತ್ತಿಯಾಗುವುದಲ್ಲವೇ?

■ ವಿನು ಗಂಗೆ

ಅಂದು ಜುಲೈ ತಿಂಗಳ ಎರಡನೇ ಭಾನುವಾರ. ಆರಾಮದ ದಿನಚರಿ ಎಂದು ನಿಧಾನಕ್ಕೆ ಎದ್ದು ಬಾಲ್ಕನಿ ಗಿಡಗಳಿಗೆ ನೀರು ನೀಡುತ್ತಿದ್ದಾಗ ಮೈಕ್‌ನಲ್ಲಿ ಮಾತುಗಳು ತೂರಿ ಬಂದ ಕಡೆ ನೋಡಿದೆ. ಮನೆ ಮುಂದಿನ ಕೆರೆ ಏರಿಯಲ್ಲಿ ನೂರಕ್ಕೂ ಹೆಚ್ಚು ಜನ ಸೇರಿದ್ದರು. ಅಲ್ಲಲ್ಲಿ ಗುಂಡಿ ತೋಡುತ್ತಿರುವುದು, ಒಂದು ಕಡೆ ಪೇರಿಸಿಟ್ಟ ಸಸಿಗಳೂ ಕಂಡವು.

ಕೆರೆ ಏರಿಯಲ್ಲಿ ಸಸಿಗಳನ್ನು ನೆಡಬೇಕೆಂದು ಬಹಳ ದಿನಗಳಿಂದ ಕಾದಿದ್ದರೂ ಕೆರೆ ಕಾಮಗಾರಿ ಶುರುವಾಗಿ ನೆಟ್ಟ ಗಿಡಗಳು ಜೆಸಿಬಿಗೆ ಬಲಿಯಾಗುವ ಸಾಧ್ಯತೆ ಇದ್ದುದರಿಂದ ಸುಮ್ಮನಿದ್ದೆ. ಈಗ ಏರಿ ಮೇಲೆ ಗಿಡಗಳು ಕಂಡ ಕೂಡಲೇ ಸವಿನಿದ್ದೆಯಲ್ಲಿದ್ದ ಮಗಳನ್ನು ಎಬ್ಬಿಸಿ ಯಜಮಾನರಿಗೆ ಬರಲು ಹೇಳಿ, ಕೆರೆ ಏರಿ ಕಡೆಗೆ ನಾನೂ ನನ್ನ ಮಗಳೂ ಓಡಿದೆವು. ಅದು ‘ಹಸುರು ಅಭಿಯಾನ’ ಕಾರ್ಯಕ್ರಮದಡಿಯಲ್ಲಿ ಗಿಡ ನೆಡುವ ಸರ್ಕಾರಿ ಕಾರ್ಯಕ್ರಮ. ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಪರಿಸರ ಪ್ರೇಮಿಗಳು, ಸ್ವಯಂ ಸೇವಕರು ಹೀಗೆ ಅನೇಕರು ಅಲ್ಲಿದ್ದರು.

ನಮ್ಮ ಭೂಮಿಯ ಉಳಿವಿಗೆ ಎಷ್ಟೊಂದು ಸ್ಪಂದಿಸುವ ಹೃದಯಗಳು, ಜೋಡಿಸುವ ಕೈಗಳು ಇರುವುದು ನೋಡಿ ಸಂಭ್ರಮವಾಯಿತು. ಆದರೆ ಮರುಕ್ಷಣವೇ ಅಲ್ಲಿ ಪೇರಿಸಿಟ್ಟ ಟಬೂಬಿಯ ಗಿಡಗಳನ್ನು ನೋಡಿ ನಿರಾಸೆ ಮೂಡಿತು. ನಿರಾಸೆ ಏಕೆಂದಿರಾ? ಹೇಳುತ್ತೇನೆ.

ಪ್ರತಿವರ್ಷ ಗಿಡ ನೆಡುವ ಕಾರ್ಯಕ್ರಮ ನಡೆಯುವುದು ಹೊಸದಲ್ಲ. ಮುಂಗಾರಿನ ಮೊದಲೆರಡು ವಾರದಲ್ಲಿ ಅರಣ್ಯ ಇಲಾಖೆ ವತಿಯಿಂದ ಬಹಳ ವರ್ಷಗಳಿಂದ ಈ ಕಾರ್ಯಕ್ರಮ ನಡೆಯುತ್ತಿದೆ. ಇಲಾಖೆಯ ನರ್ಸರಿಗಳಲ್ಲಿ ಪ್ರತಿ ವರ್ಷ ಲಕ್ಷಾಂತರ ಸಂಖ್ಯೆಯಲ್ಲಿ ಸಸಿಗಳನ್ನು ಬೆಳೆಸಲಾಗುತ್ತದೆ. ಅಪಾರ ಸಂಖ್ಯೆಯಲ್ಲಿ ಗಿಡಗಳನ್ನು ನೆಡಲಾಗುತ್ತದೆ. ನಿಮಗೆ ನೆನಪಿರಬಹುದು, ಭಾರತದಾದ್ಯಂತ ನದಿಗಳ ದಡದುದ್ದಕ್ಕೂ ಮರಗಳನ್ನು ನೆಡಬೇಕು ಎಂಬ ದೊಡ್ಡ ಅಭಿಯಾನ ಐದಾರು ವರ್ಷಗಳ ಹಿಂದೆ ಸಿನಿಮಾ ತಾರೆಗಳನ್ನೂ ಒಳಗೊಂಡು ಅತ್ಯಂತ ಹೆಚ್ಚು ಪ್ರಚಾರ ಪಡೆದುಕೊಂಡಿತ್ತು.

‘ಭಾರತದ ಅರಣ್ಯ ಸಮೀಕ್ಷೆ ವರದಿ’ (ISFR) ಪ್ರಕಾರ ಭಾರತದಲ್ಲಿ ಅರಣ್ಯ ಅಥವಾ ಮರಗಳ ವ್ಯಾಪಿತ ಪ್ರದೇಶ 2021ರಲ್ಲಿ 7.13 ಲಕ್ಷ ಚ.ಕಿ.ಮೀ. ಇದ್ದರೆ, 2023ರ ವರದಿಯಂತೆ 8.09 ಲಕ್ಷ ಚ.ಕಿ.ಮೀ. ಇದೆ. ದೇಶದ ಒಟ್ಟು ವಿಸ್ತೀರ್ಣದ 24.62 ಪ್ರತಿಶತದಷ್ಟು; ಅಂದರೆ ಸರಿಸುಮಾರು ದೇಶದ ಕಾಲು ಭಾಗದಷ್ಟು ಜಾಗವನ್ನು ವೃಕ್ಷಗಳು ವ್ಯಾಪಿಸಿವೆ. ಅಲ್ಲದೆ ಕಳೆದ ಬಾರಿಗಿಂತ ಈ ಬಾರಿ ಅರಣ್ಯೀಕರಣ ಹೆಚ್ಚಾಗಿದೆ. ಇದಕ್ಕಿಂತ ಬೇರೇನು ಬೇಕು?

ಅದು ಒತ್ತಟ್ಟಿಗಿರಲಿ. ಈಗ ಒಮ್ಮೆ ನೆನಪಿಸಿಕೊಳ್ಳಿ. ನಮ್ಮಲ್ಲನೇಕರು ಚಿಕ್ಕಂದಿನಲ್ಲಿ ಅನೇಕ ಮರಗಳೊಂದಿಗೆ ಒಡನಾಡಿದ್ದೇವೆ. ಬೂರುಗದ ಹತ್ತಿ ಕಾಯಿ ಆರಿಸಿದ್ದೇವೆ, ಅನೇಕ ಕಾಡು ಮರಗಳ ಹಣ್ಣುಗಳನ್ನು ತಿಂದಿದ್ದೇವೆ, ಪಾರಿವಾಳದ (ಹಾಲುವಾಣ) ಬೀಜ ಉಜ್ಜಿ ಜೊತೆಗಾರರ ತೊಡೆಗೆ ಬಿಸಿ ಮುಟ್ಟಿಸಿದ್ದೇವೆ, ಮಂಜಟ್ಟಿ ಬೀಜದಲ್ಲಿ ಚೆನ್ನೆಮಣೆ ಆಡಿದ್ದೇವೆ, ಕೊನಮಾವಿನ ಮರದೆಲೆಯಲ್ಲಿ ಪೀಪಿ ಊದಿದ್ದೇವೆ, ಸಳ್ಳೆ ಮರದ ಅಂಟಿನಿಂದ ಗಾಳಿಪಟ ಮಾಡಿ ಹಾರಿಸಿದ್ದೇವೆ, ಕಂಗನ ಹರಳು ಹಾಕಿ ಪೆಟ್ಲು ಹೊಡೆದಿದ್ದೇವೆ, ನೇರಲೆ ಬಳ್ಳಿಯಲ್ಲಿ, ಆಲದ ಬಿಳಲುಗಳಲ್ಲಿ ಜೋಕಾಲಿ ತೂಗಿದ್ದೇವೆ... ಹೀಗೆ ಎಲ್ಲರ ಸ್ಮೃತಿಪಟಲದ ದೂಳು ಕೊಡವಿದರೆ ಅನೇಕ ಮರಗಿಡಗಳ ನೆನಪು ಹೃದಯ ತುಂಬುತ್ತದೆ. ಪ್ರೇಮದಲ್ಲಿ ಮುಳುಗಿರುವವರನ್ನು ಮರ ಸುತ್ತುತ್ತಿದ್ದಾರೆ ಎಂದು ಕರೆಯುವ ಕಾಲವೂ ಇತ್ತು.